


International Journal of Kannada Research
www.kannadajournal.com

**ISSN: 2454–5813**
IJKR 2023; 9(1): 225-230
© 2023 IJKR
www.kannadajournal.com
Received: 01-12-2022
Accepted: 05-01-2023

**ಗಿರೀಶ. ಕೆ.ಎನ್**
ಸಹಾಯಕ ಪ್ರಾಧ್ಯಾಪಕ
ಕನ್ನಡ ವಿಭಾಗ
ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ, ಮೈಸೂರು, ಕರ್ನಾಟಕ, ಭಾರತ

**Corresponding Author:**
**ಗಿರೀಶ. ಕೆ.ಎನ್**
ಸಹಾಯಕ ಪ್ರಾಧ್ಯಾಪಕ
ಕನ್ನಡ ವಿಭಾಗ
ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ, ಮೈಸೂರು, ಕರ್ನಾಟಕ, ಭಾರತ

# ರಾಗೌ ಕಾವ್ಯದಲ್ಲಿ ಮಹಿಳಾ ಸಂವೇದನೆ

**ಗಿರೀಶ. ಕೆ.ಎನ್**

**ಪೀಠಿಕೆ**

ಭಾರತೀಯ ಸಮಾಜ ವ್ಯವಸ್ಥೆಯಲ್ಲಿ ಶತ-ಶತಮಾನಗಳಿಂದಲೂ ಪುರುಷ ಪ್ರಧಾನವಾದ ವ್ಯವಸ್ಥೆ ಅಸ್ತಿತ್ವದಲ್ಲಿದ್ದು ಈ ಮೂಲಕ ಸ್ತ್ರೀಯರ ಮೇಲೆ ದಬ್ಬಾಳಿಕೆಯನ್ನು ನಡೆಸುತ್ತಲೇ ಬಂದಿದೆ. ಮೇಲ್ನೋಟಕಷ್ಟೇ ಸ್ತ್ರೀಯರಿಗೆ ಗೌರವವನ್ನು ನೀಡಿದ್ದೇವೆಯೇ ವಿನಃ ಆಕೆಗೆ ನಿಜವಾದ ಸ್ವಾತಂತ್ರ್ಯವನ್ನು ನೀಡಿಲ್ಲ. ಮಹಿಳೆ ಎಂದು ಅನುಕಂಪ ತೋರುತ್ತೇವೆಯೇ ಹೊರತು ಸಹಾಯ ಹಸ್ತವನ್ನಾಗಲಿ, ಸಹಕಾರವನ್ನಾಗಲಿ ನೀಡುವಲ್ಲಿ ವಿಫಲರಾಗಿದ್ದೇವೆ. ಒಂದು ಕಡೆ ಹೆಣ್ಣಿಗೆ ಹೆಣ್ಣೆ ವೈರಿಯಾದರೆ ಮತ್ತೊಂದೆಡೆ ಬಲವಾದ ವೈರಿ ಪುರುಷ. ಹೀಗಿರುವಾಗ ಮಹಿಳೆಯ ಮನಸ್ಥಿತಿಯನ್ನು ಅರಿಯುವವರಾರು? ಎಂಬ ಪ್ರಶ್ನೆ ಕಾಡುತ್ತದೆ. ಹೆಣ್ಣು ಕಷ್ಟ-ಕೋಟಲೆಗಳ ಸಂಕೋಲೆಯಲ್ಲಿ ನೊಂದು ಬದುಕನ್ನು ನಡೆಸಬೇಕಾಗಿದೆ.

ಕಾಲಾನುಕ್ರಮ ಮುಂದುವರೆದಂತೆ ಸ್ತ್ರೀಯರ ಸಂಪೂರ್ಣ ಸ್ವಾತಂತ್ರ್ಯವನ್ನು ಪ್ರತ್ಯಕ್ಷವಾಗಿ-ಪರೋಕ್ಷವಾಗಿ ಕಿತ್ತುಕೊಳ್ಳುತ್ತಲೇ ಬರಲಾಗುತ್ತಿದೆ. ಹೀಗಿರುವಾಗ ಸಾಮಾಜದಲ್ಲಿ ಹೆಣ್ಣಿನ ಹದಗೆಟ್ಟ ಜೀವನವನ್ನು ನೋಡಿ ಆಕೆಯನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸಾಕಷ್ಟು ಮಹಾತ್ಮರು ಶ್ರಮಿಸಿದರು. ಬುದ್ಧ, ಬಸವಣ್ಣ, ಮಹಾತ್ಮಗಾಂಧಿ, ರಾಜರಾಮ್ ಮೋಹನ್ ರಾಯ್, ಜ್ಯೋತಿ ಬಾಪುಲೆ, ಮತ್ತು ಡಾ. ಬಿ.ಅರ್. ಅಂಬೇಡ್ಕರ್ ಮೊದಲಾದ ಸಮಾಜ ಸುಧಾರಕರು ಸ್ತ್ರೀ ಸಮಾನತೆಯನ್ನು ಸಾಧಿಸಲು ಸಾಕಷ್ಟು ಹೋರಾಟ ನಡೆಸಿದರು. ಆಧುನಿಕ ಕಾಲಘಟ್ಟದಲ್ಲೂ ಕೂಡ ಮಹಿಳೆಯರಿಗೆ ಉತ್ತಮ ವಾತಾವರಣವನ್ನು ನಿರ್ಮಿಸಲು ಶ್ರಮಿಸುತ್ತಿದ್ದಾರೆ. ಕುವೆಂಪುರವರು ತಮ್ಮ ಬರೆವಣಿಗೆಯ ಮೂಲಕ ಮಹಿಳಾ ಸಂವೇದನೆಯನ್ನು ಅಭಿವ್ಯಕ್ತಪಡಿಸಿ, ತಮ್ಮ ಮುಂದಿನ ಕವಿಗಳಿಗೆ ದಾರಿದೀಪವಾಗಿದ್ದಾರೆ. ಮುಖ್ಯವಾಗಿ ಅವರ ಮಹಾಕಾವ್ಯ ಶ್ರೀರಾಮಾಯಣ ದರ್ಶನಂನಲ್ಲಿ ಸಂಪೂರ್ಣವಾಗಿ ಮಹಿಳಾ ಸಂವೇದನೆಯೇ ಮುಖ್ಯ ವಸ್ತುವಾಗಿದೆ. ಇಂತಹ ವಿದ್ವತ್ ಮಣಿಗಳ ಪ್ರಭಾವದಿಂದ ಪ್ರೇರಣೆಗೊಂಡು ಮಹಿಳೆಯರ ಸ್ಥಿತಿ-ಗತಿಗಳನ್ನು ತಮ್ಮ ಬರೆವಣಿಗೆಯ ಮೂಲಕ ಅಭಿವ್ಯಕ್ತಪಡಿಸಿದ್ದಾರೆ. ಇಂತವರಲ್ಲಿ ಡಾ. ರಾಮೇಗೌಡ ಅವರು ಕೂಡ ಹೊರತಾಗಿಲ್ಲ.

ಹೆಣ್ಣಿಗೆ ಸಂಕೋಲೆಯಂತಿದ್ದ ಸತಿ ಪದ್ಧತಿ, ಬಾಲ್ಯವಿವಾಹ ಮತ್ತು ವಿಧವಾ ಪದ್ಧತಿಯಿಂದ ಮಹಿಳೆಯರ ಮೇಲೆ ನಡೆಯುತ್ತಿದ್ದ ಶೋಷಣೆಯನ್ನು ರಾಗೌ ತಮ್ಮ ಸಾಹಿತ್ಯ ಮೂಲಕ ಖಂಡಿಸಿದ್ದಾರೆ. ಇಂದು ನಾವು ಯಾವ ಸ್ತ್ರೀಯರನ್ನು ಆದರ್ಶ ಸ್ತ್ರೀ ಎಂದು ಗೌರವಿಸುತ್ತಿದ್ದೇವೆಯೋ ಅವರೆ ಶೋಷಣೆಗೆ ಒಳಗಾಗಿದ್ದನ್ನು ಕಾಣಬಹುದು. ರಾಮಾಯಣದಲ್ಲಿ ಸೀತೆ ಮತ್ತು ಮಂಡೋದರಿ, ಮಹಾಭಾರತದ ರೂವಾರಿ ಎನ್ನುವ ದ್ರೌಪದಿ ಇನ್ನೂ ಮುಂತಾದ ಮಹಿಳೆಯರು ಅನುಭವಿಸಿದ ಕಷ್ಟ-ಕೋಟಲೆಗಳು ಹೇಳತೀರದು. ಈ ತರಹದ ಸಮಸ್ಯೆ ಹಿಂದಿನಿಂದಷ್ಟೆ ಮಾತ್ರವಲ್ಲ ಇಂದಿಗೂ ಕೂಡ ಜೀವಂತವಾಗಿದೆ. ಪ್ರಸಕ್ತದಲ್ಲಿ ಹೆಣ್ಣಿನ ಪರವಾಗಿ ಕಾನೂನುಗಳು ಎಷ್ಟೇ ಪರಿಷ್ಕರಣೆಯಾಗುತ್ತಿದ್ದರೂ ಕೂಡ ಮಹಿಳೆಯರ ಮೇಲಿನ ದೌರ್ಜನ್ಯಗಳು ಪ್ರತಿದಿನ ಹೆಚ್ಚಾಗುತ್ತಲೇ ಇವೆ. ಅದರೂ ಮಹಿಳೆ ಇದೆಲ್ಲವನ್ನು ಸಹಿಸಿಕೊಂಡು ಎಲ್ಲ ಕ್ಷೇತ್ರಗಳಲ್ಲೂ ಆಕಾಶದೆತ್ತರಕ್ಕೆ ಬೆಳೆದಿರುವುದು ಅವಳ ಪರಿಶ್ರಮದ ಫಲವೇ ಸರಿ ಎನ್ನಬಹುದು.

ಸ್ತ್ರೀಯರನ್ನು ಕುರಿತು ಬರೆಯುವುದು ಕೇವಲ ಸ್ತ್ರೀಯರೇ ಆಗಿರಬೇಕೆಂದೇನೂ ಇಲ್ಲ. ಸ್ತ್ರೀ ಸಂವೇದನೆಯುಳ್ಳ ಪುರುಷ ಲೇಖಕನಿಂದಲೂ ಸಾದ್ಯ ಎಂಬುದನ್ನು ಡಾ.ರಾಗೌ ಅವರು ತೋರಿಸಿಕೊಟ್ಟಿದ್ದಾರೆ. ತಮ್ಮ ಮುದ್ದು ಮಗಳನ್ನು ಕಳೆದುಕೊಂಡಾಗಲಂತೂ ಅನುಭವಿಸಿದ ಸಂಕಟ ಸಾಕಷ್ಟು. 'ನೊಂದವರ ನೋವ ನೋಯದವರೆತ್ತಾ ಬಲ್ಲರು' ಎಂಬ ಮಾತಿನಂತೆ ಸ್ವತಃ ತಾವೇ

ಸ್ತ್ರೀಯರನ್ನು, ಅವರ ಸ್ಥಿತಿಗತಿಯನ್ನು ಕಂಡು ಮರುಗುವ ಮಾತೃ ಹೃದಯಿ ರಾಗೌ ಎಂಬುದನ್ನು ತಮ್ಮ ಕಾವ್ಯದ ಮೂಲಕ ತಿಳಿಸಿಕೊಟ್ಟಿದ್ದಾರೆ.
ಸ್ತ್ರೀವಾದ ಇತ್ತೀಚೆಗೆ ಪ್ರಚಲಿತವಿದ್ದು, ಸ್ತ್ರೀ ಸಂವೇದನೆಯನ್ನು ಕುರಿತು ವಿಚಾರಪೂರಿತ ಚಿಂತನೆ ನಡೆಸುತ್ತಿರುವುದು ಆಶಾದಾಯಕವಾದ ಬೆಳವಣಿಗೆ ಎಂದೇ ಹೇಳಬಹುದು. ಈ ಹಿನ್ನೆಲೆಯಲ್ಲಿ ಡಾ.ರಾಗೌ ಅವರ ಕಾವ್ಯ ಕೃಷಿಯನ್ನು ಅಧ್ಯಯನ ಮಾಡಿದಾಗ ಅವರ ಸಾಕಷ್ಟು ಕವಿತೆಗಳು ಸ್ತ್ರೀಯರ ಬದುಕಿನ ಬಗ್ಗೆ, ಸ್ತ್ರೀ ಸಮಾನತೆ, ಸ್ತ್ರೀಯರ ನೋವು, ಸ್ತ್ರೀಪರವಾದ ಚಿಂತನೆ ಮತ್ತು ಆಲೋಚನೆಗಳಿಂದ ಕೂಡಿರುವುದನ್ನು ಗಮನಿಸಬಹುದು.
ರಾಗೌ ಅವರು ಸ್ತ್ರೀ ಸ್ವಾತಂತ್ರವನ್ನು ಕುರಿತು ಹಲವು ಕಡೆ ಚರ್ಚಿಸಿದ್ದಾರೆ. 'ಹಾಡು ಹಕ್ಕಿಯ ತೆರ' ಕವನದಲ್ಲಿ ಇಲ್ಲ-ಸಲ್ಲದ ಒತ್ತಡಗಳನ್ನು ಬಲವಂತವಾಗಿ ಹೇರಿ ಹೆಣ್ಣಿಗೆ ನೋವನ್ನು ಕೊಡಬಾರದು. ಅವಳೊಡಗೂಡಿ ಸಂತೋಷದಿಂದ ಸುಖಿಸಬೇಕು ಎಂದು ಹೇಳುತ್ತಾ,
"ಹಾಡು ಹಕ್ಕಿಯ ತೆರ ಗರಿಬಿಚ್ಚಿ ಹಾರಾಡುತ ಅವಳಿಗೂ ಸಿಕ್ಕಲಿ ಸ್ವಾತಂತ್ರ್ಯದ ವರ!" [ರಾಗೌ ಸಮಗ್ರ ಕಾವ್ಯ- ೪೨೧] ಎನ್ನುವ ಮೂಲಕ ಹೆಣ್ಣಿಗೂ ಅವಳದೇ ಆದ ಬದುಕಿದೆ ಹಾಗಾಗಿ ಅವಳಿಗೂ ಸ್ವಾತಂತ್ರ್ಯದ ಅಗತ್ಯತೆ ಇದೆ ಎಂಬುದಾಗಿ ಹೇಳಿ ನೊಂದ ಮಹಿಳೆಯರ ಧ್ವನಿಯಾಗಿದ್ದಾರೆ.

"ಪುರುಷ ಪ್ರಧಾನತೆಯನೆಲ್ಲ
ಇತಿಹಾಸಕ್ಕೆ ಬಿಟ್ಟುಕೊಟ್ಟು
ಸಮಪ್ರದಾನತೆಯನ್ನು ಸ್ಥಾಪಿಸಬಾರದೇಕೆ"

ಎಂಬ ಸಾಲುಗಳ ಮೂಲಕ ಸ್ತ್ರೀಪರವಾದ ಸಮಾನತೆಗೆ ಕೈಜೋಡಿಸಿದ್ದಾರೆ. "ಹೆಣ್ಣಿನ ಮನಸ್ಸು ನೂರೆಂಟು ತನನಗಳಲಿ ಹಾದುಹೋಗುವಾಗ ಹಾಡಿದವು ಕಾರ್ಮೋಡ, ಭೋರ್ಗರೆದವು ಪ್ರಪಾತ, ಒದ್ದೆ ಆದವು ಅಲ್ಲೆಲ್ಲ ಕುಳಿತ ಬೆಟ್ಟ-ಗುಡ್ಡ" [ರಾಗೌ ಸಮಗ್ರ ಕಾವ್ಯ- ಪು.ಸಂ.೫೭೨] ಎನ್ನುವಲ್ಲಿ ಹೆಣ್ಣಿನ ಶಕ್ತಿ, ಸಾಮರ್ಥ್ಯವನ್ನು ವಿವರಿಸಿದ್ದಾರೆ. ಹೆಣ್ಣು ಮನಸ್ಸು ಮಾಡಿದರೆ ಈಡೀ ಭೂಮಂಡಲವನ್ನೆ ಬದಲಾವಣೆ ಮಾಡುವಂತಹ ಗುಣವನ್ನು ಹೊಂದಿದ್ದಾಳೆ. ಆಕೆಯ ಮನಸ್ಸಿನ ತಲ್ಲಣಗಳಿಗೆ ಪ್ರಕೃತಿಯೇ ಸ್ಪಂದಿಸುವಾಗ ಹೆಣ್ಣು ಸಮಾಜದ ವಿರುದ್ಧ ತಿರುಗಿನಿಂತರೆ ಬದಲಾವಣೆಯು ಸತಸಿದ್ಧ ಎಂದಿದ್ದಾರೆ. ಇದು ವಾಸ್ತವ ಸತ್ಯವೂ ಕೂಡ.
ಗ್ರೀಕ್ ದಾರ್ಶನಿಕ ಅರಿಸ್ಟಾಟಲ್‌ನ ಪ್ರಕಾರ "ಹೆಣ್ಣು ತನ್ನಲ್ಲಿರುವ ಕೆಲವು ಕೊರತೆಗಳಿಂದಾಗಿ ಹೆಣ್ಣಾಗಿದ್ದಾಳೆ. ಹೆಣ್ಣಿನ ಸ್ವಭಾವವು ಕೆಲವು ನಿಸರ್ಗದತ್ತ ಮಿತಿಗಳಿಂದ ರೂಪಿಸಲ್ಪಟ್ಟಿದೆ". ಎಂದಿದ್ದಾರೆ. [ಸಾಹಿತ್ಯ ವಿಮರ್ಶೆ ಸಿ.ಎನ್.ರಾಮಚಂದ್ರನ್.೯೧] ಗಂಡಿಗೂ ಹೆಣ್ಣಿಗಿರುವಂತೆ ವಿಶಿಷ್ಟ ದೈಹಿಕ ಅಂಗಾಂಗಗಳಿವೆಯೆಂದು, ದೈಹಿಕ ಮಿತಿಗಳಿವೆಯೆಂದು ಪುರುಷನಿಗೆ ತೋಚುವುದೇ ಇಲ್ಲ. ಹಾಗಾಗಿ ರಾಗೌ
'ಅರಿಯಲಾರಿರ ಅಣ್ಣಗಳಿರಾ' ಎಂಬ ಕವನದಲ್ಲಿ ಹೆಣ್ಣು ಮಾಯೆ ಎಂದು ಏಕೆ ತಿಳಿಯುತ್ತೀರಾ ನಮ್ಮಂತೆ ಎಂದು ಅವಳನ್ನು ಭಾವಿಸಿ ಎಂದು ಹೇಳುತ್ತಾ,

" ನಿಮ್ಮ ನಿಮ್ಮ ಮನದೊಳಗಿನ ಗುಮ್ಮಗಳನು
ಬಿಮ್ಮನೆ ಬಿಸುಟ್ಟು ಸುಮ್ಮನಿರಲಾರಿರ"
[ರಾಗೌ ಸಮಗ್ರ ಕಾವ್ಯ- ಪು.ಸಂ.೪೨೦]

ಎನ್ನುವಲ್ಲಿ ಪುರುಷರ ಮನಸ್ಥಿತಿಯನ್ನು ತೀಕ್ಷ್ಣವಾಗಿ ಕುಟುಕಿದ್ದಾರೆ. ಕವನದ ಅಂತ್ಯದಲ್ಲಿ "ನಿಮ್ಮ ಹಾಗೆ ಮನಸೊಂದು ಅವಳಿಗಿವುದೆಂದು ಮನ್ನಣೆಯ ನೀಡಿ ಬಿನ್ನಾಣವ ಬಿಡಾಲಾರಿರಾ"! ಎನ್ನುವ ಮೂಲಕ ರಾಗೌ ಸ್ತ್ರೀಪುರುಷರಿಬ್ಬರೂ ಸಮಾನರು ಎಂಬ ಅರಿಸ್ಟಾಟಲ್ ಮಾತನ್ನು ಸ್ಪಷ್ಟಪಡಿಸಿದ್ದಾರೆ.
'ಅಭಿಮಾನ' ಎನ್ನುವ ಕವನದಲ್ಲಿ ಹೆಣ್ಣು ಗಂಡಿನ ನಡುವೆ ಭೇದವಿಲ್ಲ. ಇಬ್ಬರನ್ನು ಒಂದೇ ತಕ್ಕಡಿಯಲ್ಲಿ ತೂಗಲಿ ಇದಕ್ಕೆ ಯಾವುದೇ ಮಾನದಂಡ ಬೇಡ. ಪುರುಷನೆದುರು ಆಕೆ ಅಸಾಹಾಯಕಳಲ್ಲ ಎಂದು, ಆಕೆಯನ್ನು ಸಮತಾಭಾವ ಮತ್ತು ಅಭಿಮಾನದಿಂದ ಕಾಣಬೇಕಾಗಿದೆ ಹೊರತು ನಿರಾಕರಿಸಬಾರದು ಎಂದು ಹೇಳಿದ್ದಾರೆ. ಹನ್ನೆರಡನೇ ಶತಮಾನದ ವಚನಕಾರರ ಲಿಂಗ ಸಮಾನತೆ ತತ್ವವನ್ನು ಎತ್ತಿಹಿಡಿದಿದ್ದಾರೆ.

ಹೆಣ್ಣಿನ ಕಣ್ಣೀರಧಾರೆಯಲಿ
ಜಗಧರ್ಮ ತೊಯ್ದು ಹೋಗಿದೆ
ಒರೆಸುವ ಕೈಗಳು ಚೌಕಾಶಿ ಮಾಡುತ್ತಿರೆ
ಅಂತಿಮ ಮಂತ್ರದಂಡವಾದರು ಎಲ್ಲಿದೆ.
[ರಾಗೌ ಸಮಗ್ರ ಕಾವ್ಯ – ಪು.ಸಂ.೯೪೭]

ಎಂದು ಹೇಳುವ ಮೂಲಕ ಗಂಡು ಹೆಣ್ಣಿನ ಕಣ್ಣೀರನ್ನು ಒರೆಸುವ ಕೈಗಳಾಗಬೇಕು. ಹೆಣ್ಣನ್ನು ಪ್ರೀತಿಸುವ ವಿಚಾರದಲ್ಲಿ ಚೌಕಾಸಿ ಮಾಡಬಾರದು. "ಕಾಲದ ಕಟುಕುದುರೆಯ ಮೇಲೆ ಕುಳಿತಿರಲು ಹೆಣ್ಣೊಂದು; ಶಾಪಗ್ರಸ್ತ ರಸ್ತೆಯಲಿ ದುಃಖಾಶ್ರುವಿರಲು" [ ರಾಗೌ ಸಮಗ್ರ ಕಾವ್ಯ – ಪು.ಸಂ.೬೨೮] ಹೆಣ್ಣಿನ ಕಣ್ಣೀರಧಾರೆಯಿಂದ ಈಡೀ ಜಗತ್ತೆ ತೊಯ್ದು ಹೋಗಿದೆ ಇನ್ನೂ ಮುಂದೆ ಅವಳ ನೋವಿಗೆ ತೆರೆ ಎಳೆದು ಆಕೆಗೂ ಬದುಕಲು ಅವಕಾಶಮಾಡಿಕೊಟ್ಟು, ಅವಳ ಸುಂದರ ಬದುಕಿಗೆ ನೀರೆರೆಯಬೇಕಾಗಿದೆ ಎಂದು "ಕಪ್ಪು ಚುಕ್ಕೆಗಳನಳಿಸಿ ಸುವರ್ಣಾಕ್ಷರದಲಿ ಬರೆಯಲಿ ನಿಂತ ಎಲ್ಲ ಬಗೆಯ ಶೋಷಣೆ" ಸ್ತ್ರೀಯರ ಎಲ್ಲ ಸಮಸ್ಯೆಗಳು ಇಂದೇ ಕೊನೆಗೊಳ್ಳಲಿ ಎಂದಿದ್ದಾರೆ. [ ರಾಗೌ ಸಮಗ್ರ ಕಾವ್ಯ – ಪು.ಸಂ.೬೭೨]
'ಅಳಲನಳಿಸುವುದೆಂದು' ಎಂಬ ಕವನದಲ್ಲಿ ಪುರುಷ ಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಯುಗಯುಗಳಿಂದ ಹೆಣ್ಣಿನ ಮೇಲೆ ನಡೆಸಿಕೊಂಡು ಬಂದಿರುವ ಶೋಷಣೆಯನ್ನು ತಿಳಿಸುತ್ತಾ, ಸ್ತ್ರೀ ಪುರುಷರಿಬ್ಬರು ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು ಸಾಮರಸ್ಯದಿಂದ ಬದುಕುವಂತಾಬೇಕು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಪುರುಷಪರ ಸ್ತ್ರೀಪರ ಎಂಬುದೆಲ್ಲ ಉಭಯಪರ
ತಳೆದು ನಿಲ್ಲಲಿ ಮನುಕುಲದ ಧೋರಣೆ
ಹೆಣ್ಣಿನ ಅಳಲನಳಿಸುವುದೆಂದು; ದಿನೇ ದಿನೆ
ಉಲ್ಬಣಿಸುತ್ತಿದೆ ಬದುಕು ದೊರೆಯೆ
[ರಾಗೌ ಸಮಗ್ರ ಕಾವ್ಯ – ಪು.ಸಂ.೬೭೨]

ಎಂದು ಹೇಳುವ ಮೂಲಕ ಸಮಾನತೆಯ ತತ್ವವನ್ನು ಎತ್ತಿಹಿಡಿದಿದ್ದಾರೆ. ಹೆಣ್ಣಿನ ಅಂತರಾಳದ ನೋವನ್ನು ಅಳಿಸದೆ ಹೋದರೆ ಸಮಾಜಕ್ಕೆ ಅಪಕೀರ್ತಿ. ಅವಳ ಮುಖದಲ್ಲಿ ಮಂದಹಾಸ ಮೂಡುವ ತನಕ ನಾವೆಲ್ಲರು ಅವಳ ದುಃಖಕ್ಕೆ ಕಾರಣವಾಗಿರುವ ವ್ಯವಸ್ಥೆಯ ವಿರುದ್ಧ ಚಳವಳಿಯನ್ನು ಮಾಡಬೇಕಾಗಿದೆ. ಈ ಮೂಲಕ ಹೆಣ್ಣಿನ ಅಳಲನ್ನು ಸರಿಪಡಿಸುವ ಕಾರ್ಯಗಳು ದಿನೇ ದಿನೇ ನಡೆಯುತ್ತಿರಬೇಕು ಎಂದಿದ್ದಾರೆ.

‘ವಿಧವೆ’ ಎನ್ನುವ ಕವನದಲ್ಲಿ ರಾಗೌ ಅವರು ಸಮಾಜಿಕವಾಗಿ ಕಾಡುತ್ತಿರುವ ವಿಧವೆ ಸಂಬಂಧಿಸಿದ ಆಚರಣೆಯ ಬಗ್ಗೆ ಕಟುವಾಗಿ ಟೀಕಿಸಿದ್ದಾರೆ. ಸಂಪ್ರದಾಯದ ಹೆಸರಿನಲ್ಲಿ ನಡೆಯುವ ಅನಿಷ್ಟವನ್ನು ಬುಡಸಹಿತ ಕಿತ್ತುಹಾಕಬೇಕು ಎಂದು ವಿಧವೆಯ ಅಳಲನ್ನು ತಮ್ಮ ಕವನದಲ್ಲಿ ಚಿತ್ರಿಸಿದ್ದಾರೆ.

ಅಳಿಸಲಾರೆನೆನ್ನ ತಂಗಿಯ ಕುಂಕುಮವ ಯಾ ಬಳೆಯ
ಕುಂಕುಮ ಬಳೆಗಳಿಗಿಂತ ಅಳಿಸಬೇಕಿವಳ ಕಂಬನಿಯ
[ರಾಗೌ ಸಮಗ್ರ ಕಾವ್ಯ ಪು.ಸಂ. ೧೫೦]

ರಾಗೌ ಅವರ ಈ ಸಾಲುಗಳು ನೊಂದ ಹೆಣ್ಣಿನ ಮನಸ್ಥಿಯನ್ನು ಅರಿತು ಅವಳಿಗೊಂದು ಹೊಸ ಬದುಕನ್ನು ರೂಪಿಸಿಕೊಳ್ಳಲು ಸಹಾಯ ಮಾಡಬೇಕು ಎನ್ನುವಂತಹ ನೆಲೆಯಲ್ಲಿವೆ.
ರಾಗೌ ಅವರು ಕಾವ್ಯ ಸೃಷ್ಟಿಸುವಾಗ ಸ್ತ್ರೀಪರವಾದ ಮಾನವೀಯತೆ ಮತ್ತು ಅನುಕಂಪವನ್ನು ಮೆರೆಯುತ್ತಾರೆ. ಈ ಮಾನವೀಯ ಅನುಕಂಪವು ಕೇವಲ ಅನುಕಂಪವಾಗಿ ಮಾತ್ರ ಉಳಿಯದೆ ‘ವಿಧವೆ’ ಕವನದಲ್ಲಿ ಕ್ರೀಯಾಶೀಲ ಪ್ರಗತಿಪರ ಆಶಯವಾಗಿ ಉಳಿದಿದೆ. ಬೇಂದ್ರೆಯವರ ‘ಪುಟ್ಟ ವಿಧವೆ’ ಕವನದ ಆಶಯದಲ್ಲೇ ಕವನ ಸಾಗಿದರು ಕಡೆಗೆ ತೆರೆದುಕೊಳ್ಳುವ ಪ್ರಗತಿಪರ ಆಶಯದಿಂದಾಗಿ ಭಿನ್ನತೆಯನ್ನು ತಳೆಯುತ್ತದೆ. ಬೇಂದ್ರೆಯವರ ಈ ಕವನ ಸಾಮಾಜಿಕ ಅನಿಷ್ಟವೊಂದರ ಉದ್ಭವದೊಡನೆ ಮುಕ್ತಾಯವಾದರೆ, ರಾಗೌ ಅವರ ವಿಧವೆ ಕವನ ಸಾಮಾಜಿಕ ಸಾಂಪ್ರದಾಯದ ಅನಿಷ್ಟವೊಂದರ ನಾಶದೊಡನೆ ಮಾನವತೆಯ ರೂಪ ಧರಿಸುವುದರೊಂದಿಗೆ ಮುಕ್ತಾಯವಾಗುತ್ತದೆ.

ಮುಟ್ಟಬರೆ ಕುಟ್ಟಿ ಕೆಡುಹುವೆನೆಂದಣ್ಣ ಗುಡುಗೆ
ರೂಢಿ ತಪ್ಪಿತ್ತೆಂದು ಕಂಗಾಲಾದರು ಹಳೆಯ ಮಂದಿ
ಕಿರಿಯರೆದೆಯಲಿ ಹೊತ್ತಿಕೊಂಡಿತ್ತೊಂದು ಹೊಸ ಜ್ಯೋತಿ.
[ರಾಗೌ ಸಮಗ್ರ ಕಾವ್ಯ ಪು.ಸಂ. ೧೫೦]

ರಾಗೌ ಅವರ ಈ ಕವನದ ಸಾಲುಗಳು ಪ್ರತಿಭಟನೆಯ ಧ್ವನಿಯನ್ನು ಎತ್ತಿಹಿಡಿಯುತ್ತವೆ. ವಿಧವೆಗೆ ಸಂಬಂಧಿಸಿದ ಆಚರಣೆಗಳು ಬದಲಾಗಬೇಕು, ಆಕೆಯ ಭಾವನೆಗಳಿಗೆ ಧಕ್ಕೆಯಾಗಬಾರದು ಎಂದು ಇಂದಿನ ಯುವಪೀಳಿಗೆಗೆ ಅರಿವನ್ನು ಮೂಡಿಸುವುದರ ಜೊತೆಗೆ ಸಾಮಾಜಿಕವಾಗಿ ಬದಲಾವಣೆಯನ್ನುಂಟು ಮಾಡುವ ಮಾರ್ಗದತ್ತ ಸಾಗಿದವರು ರಾಗೌ.
ಇಂದು ನಾವೆಲ್ಲರೂ ತಂತ್ರಜ್ಞಾನದ ನಾಗಲೋಟದಲ್ಲಿ ಬದುಕನ್ನು ಸಾಗಿಸುತ್ತಿದ್ದೇವೆ. ಇದು ಒಂದಷ್ಟು ಸಮಾಜಕ್ಕೆ ಒಳಿತಾದರು ಸ್ತ್ರೀಯರಿಗೆ ಮಾರಕವೆಂದೇ ಭಾವಿಸಬಹುದಾಗಿದೆ. ಏಕೆಂದರೆ ಈ ತಂತ್ರಜ್ಞಾನದಿಂದ ಭ್ರೂಣಹತ್ಯೆ, ಶಿಶುಹತ್ಯೆಗಳು ನಡೆಯುತ್ತಿರುವುದು ಒಂದು ಕಡೆಯಾದರೆ, ಮತ್ತೊಂದೆಡೆ ವರದಕ್ಷಿಣೆ ಕಿರುಕುಳ. ಈ ಬಗೆಯ ಎಲ್ಲ ಸಮಸ್ಯೆಗಳು ಸ್ತ್ರೀಯರ ಬದುಕನ್ನು ನಾಶಮಾಡುತ್ತಿವೆ. ಹಾಗಾಗಿ ರಾಗೌ ‘ಕಪ್ಪು ಇತಿಹಾಸ’ ಎಂಬ ಕವನದಲ್ಲಿ

ಶಿಶುಹತ್ಯೆಯಿಂದ ಹಿಡಿದು ಸೀಮೆಯೆಣ್ಣೆವರೆಗೆ
ದಹಿಸಿಹೋಗುತ್ತಿರುವಳು ಕಣ್ಣೆದುರೆ;
[ರಾಗೌ ಸಮಗ್ರ ಕಾವ್ಯ ಪು.ಸಂ.೪೨೦]

ಇಲ್ಲಿ ರಾಗೌ ಅವರು ಸ್ತ್ರೀಯರ ಬದುಕಿನಲ್ಲಿ ಸಮಾನತೆ ಎಂಬುದೇ ಮರೀಚಿಕೆಯಾಗಿದೆ ಇಂತಹ ಅನಿಷ್ಟಗಳಿಗೆಲ್ಲ ಪರಿಹಾರ ಸಿಗುವುದಾದರು ಯಾವಾಗ?ಎಂದು ಪ್ರಶ್ನಿಸಿದ್ದಾರೆ. ಪ್ರಸ್ತುತದ ವಿದ್ಯಮಾನಗಳನ್ನು ಗಮನಿಸಿದರೆ ಸ್ವತಃ ನನಗೆಯೇ ಹೆದರಿಕೆಯಾಗುತ್ತದೆ ಎಂಬುದಾಗಿ ವಿಷಾದವನ್ನು ವ್ಯಕ್ತಪಡಿಸಿ ಕೊನೆಯದಾಗಿ ಭಗವಂತನಿಗೆ ಮೊರೆಹೊಗುತ್ತಾರೆ. ಸಮಾಜದಲ್ಲಿ ನಡೆಯುತ್ತಿರುವ ನೀಚ ಕೃತ್ಯಗಳ ವಿರುದ್ಧ ಕಿಡಿಕಾರಿದ್ದಾರೆ. ಇಲ್ಲಿ ಸಾಮಾಜಿಕ ಕಳಕಳಿಯ ಜೊತೆಗೆ ಮಹಿಳೆಯರ ಸುಂದರ ಬದುಕಿಗಾಗಿ ತಮ್ಮ ಬರೆಹಗಳ ಮೂಲಕ ಯುವ ಜನತೆಯ ಮನಸ್ಸಿನಲ್ಲಿ ಸಕರಾತ್ಮಕ ಬದಲಾವಣೆಯನ್ನು ತರಲು ಶ್ರಮಿಸುತ್ತಿದ್ದಾರೆ.
‘ಕುದಿವ ಹೃದಯಿ’ ಕವನದಲ್ಲಿ ರಾಗೌ ಸ್ತ್ರೀಯು ತನಗಾಗುವ ಎಲ್ಲ ನೋವುಗಳನ್ನು ತಾನೇ ಅನುಭವಿಸಿ ಏನೂ ಸಮಸ್ಯೆ ಇಲ್ಲವನೋ ಎನ್ನುವ ಹಾಗೆ ಮೆಲ್ನೋಟಕ್ಕೆ ಕಂಡರೂ ಕೂಡ ಆಕೆಯ ಹೃದಯ ಸದಾ ಕುದಿಯುತ್ತಿರುತ್ತದೆ ಎಂದು ಹೇಳುವ ಸಂದರ್ಭದಲ್ಲಿ ಈ ಕೆಳಗಿನ ಸಾಲುಗಳ ಮೂಲಕ ಸ್ತ್ರೀಯ ಅಂತರಂಗದ ಕಿಚ್ಚನ್ನು ಅನಾವರಣಗೊಳಿಸಿದ್ದಾರೆ.

ನಲಗುವ ಅಂಶಗಳಿಗೇನು ಕೊರತೆಯೆ
ಸ್ತ್ರೀ ಪರಂಪರೆಯೊಳಗೆ;
ಇತರರು ಕಾರಣರಾದರೆ ಹಲವಕೆ
ಸ್ವಯಂ ಕಾರಣಗಳು ಕೆಲವಕೆ
ಕಡೆಗೂ ಸುಖವಿರದ ಸ್ತ್ರೀ
ಒಳಗೊಳಗೆ ಕುದಿವ ಹೃದಯಿ !
[ರಾಗೌ ಸಮಗ್ರ ಕಾವ್ಯ ಪು.ಸಂ.೪೯೯]

ಸ್ತ್ರೀಯರ ನೋವಿಗೆ, ಸಮಸ್ಯೆಗೆ ಅಥವ ಅವಳ ದಮನಕ್ಕೆ ಕಾರಣಗಳೇನು ಎಂದು ಹುಡುಕುತ್ತಾ ಹೋದರೆ ಸಾಕಷ್ಟು ಪಟ್ಟಿ ಮಾಡಬಹುದು. ಆದರೆ ರಾಗೌ ಅವರು ಸ್ತ್ರೀಯ ಸಮಸ್ಯೆಗಳಿಗೆ ಕೊರತೆ ಏನು ಇಲ್ಲ. ಒಂದಲ್ಲ ಒಂದು ರೀತಿಯಲ್ಲಿ ಶೋಷಣೆಗೆ ಒಳಗಾಗುತ್ತಲೇ ಬಂದಿದ್ದಾಳೆ. ಕೆಲವೊಂದಕ್ಕೆ ಬೇರೆಯವರು ಕಾರಣರಾದರೆ, ಮತ್ತೆ ಕೆಲವು ಸಮಸ್ಯೆಗಳಿಗೆ ಸ್ವತಃ ಸ್ತ್ರೀಯೇ ಕಾರಣಳು ಎನ್ನುತ್ತಾರೆ.
ಈ ಬಗೆಯಲ್ಲಿ ನಿತ್ಯ ಸುಖವಿರದೆ ಸದಾ ನೋವಿನಲ್ಲೇ ಬದುಕು ಸಾಗಿಸುವ ಸ್ತ್ರೀಯರ ಹೃದಯ ನಿರಂತರವಾಗಿ ಕುದಿಯುತ್ತಿರುತ್ತದೆ. ಅದರೂ ಅಸಾಯಕಳಂತೆ ಜೀವನ ಸಾಗಿಸುತ್ತಿರುವುದನ್ನು ಗಮನಿಸಿದರೆ ನೋವಾಗುತ್ತದೆ ಎಂದು ಹೇಳುವಾಗ ಹಿನ್ನೆಲೆಯಲ್ಲಿ ರಾಗೌ ಅವರ ಸ್ತ್ರೀಪರ ಕಾಳಜಿಯು ಗೋಚರಿಸುತ್ತದೆ..
ಸ್ತ್ರೀ ಪುರುಷರ ಸಮಾನತೆಯ ಬಗ್ಗೆ ಮಾತನಾಡುವಾಗ ಹಾಸ್ಯದ ಜೊತೆಗೆ ಗಂಬೀರವಾಗಿ ಸಮಾನತೆಯನ್ನು ಕುರಿತು ಬಹಳ ಸೂಕ್ಷ್ಮವಾಗಿ ನಿರೂಪಿಸುವಂತಹ ನೈಪುಣ್ಯತೆ ರಾಗೌ ಅವರದು. ಸಾಮಾನ್ಯವಾಗಿ ಹೆಂಡತಿಯ ಹೆಸರಿನ ಮುಂದೆ ಗಂಡನ ಹೆಸರು ಬರುವುದು ಸಹಜ ಅದರಂತೆ ಗಂಡನ ಹೆಸರಿನ ಮುಂದೆ ಹೆಂಡತಿಯ ಹೆಸರನ್ನು ಯಾಕೆ ಸೇರಿಸಬಾರದು? ಎಂದು ಪ್ರಶ್ನಿಸುತ್ತಾ ಪುರುಷ ಪ್ರಾಧಾನ್ಯಯತೆಯನ್ನೆಲ್ಲ ಇತಿಹಾಸಕ್ಕೆ ಬಿಟ್ಟು ಇನ್ನೂ ಮುಂದೆಯಾದರು ಸಮಪ್ರಧಾನತೆಯನ್ನು ಸ್ಥಾಪಿಸಬೇಕು ಎಂಬುದು ರಾಗೌ ಅವರ ಚಿಂತನೆಯಾಗಿದೆ.
ಹೆಣ್ಣು ಮಾಯೆ ಎನ್ನುವ ಕಾಲವೊಂದಿತ್ತು. ಅನಂತರ ಮೊದಲ ಬಾರಿಗೆ ಅಲ್ಲಮಪ್ರಭು ಹೆಣ್ಣು ಮಾಯೆಯಲ್ಲ. ನಮ್ಮ ಮನಸ್ಸಿನಲ್ಲಿರುವ ಆಸೆಯೇ ಮಾಯೆಯೆಂದು ಸ್ಪಷ್ಟಪಡಿಸಿದರು. ಸ್ತ್ರೀಯರನ್ನು ಕುರಿತು ಮಾಯೆ ಎಂಬ ಪದವನ್ನು ಅರ್ಥೈಸಿರುವ ರಾಗೌ

ಮಾಯೆಯಲ್ಲದ ಮಾಯೆ! ಸ್ತ್ರೀಯೆ!
ಜೀವನವೆಲ್ಲವ ಹಿಡಿದಿಡುವ ತಾಯೆ
[ರಾಗೌ ಸಮಗ್ರ ಕಾವ್ಯ ಪು.ಸಂ.೩೮೧]

ಸಮಾನ್ಯವಾಗಿ ಮಾಯೆ ಎಂಬ ಪದಕ್ಕೆ ಅರ್ಥ ಹುಡುಕುತ್ತಾ ಹೋದರೆ ಪ್ರೀತಿ, ಮೋಸ, ಭ್ರಾಂತಿ, ವ್ಯಾಮೋಹ ಎಂಬಿತ್ಯಾದಿ ಅರ್ಥಗಳನ್ನು ಕಾಣಬವುದು. ಆದರೆ ಬಹುತೇಕವಾಗಿ ಸ್ತ್ರೀ ವಿಚಾರದಲ್ಲಿ ಮೋಸ, ಭ್ರಾಂತಿ, ಮತ್ತು ವ್ಯಾಮೋಹ ಎಂಬ ಅರ್ಥದಲ್ಲಿಯೇ ವ್ಯಾಖ್ಯಾನಿಸುತ್ತಿದ್ದೇವೆಯೇ ವಿನಃ ಪ್ರೀತಿಯ ನೆಲೆಯಲ್ಲಿ ಕಂಡಿದ್ದೆ ಕಡಿಮೆ. ಆದರೆ ರಾಗೌ ತಮ್ಮ ಬದುಕಿನುದ್ದಕ್ಕೂ ಸ್ತ್ರೀಯನ್ನು ಪ್ರೀತಿ, ಮಮತೆ ಮತ್ತು ಗೌರವದಿಂದ ಸ್ವೀಕರಿಸಿದ್ದಾರೆ. ಹೆಣ್ಣು ಮಾಯೆಯಲ್ಲ ಅವಳು ಮಮತೆಯ ಪ್ರತಿರೂಪವಾಗಿದ್ದಾಳೆ ಎನ್ನುತ್ತಾರೆ.

'ಹೆಣ್ಣಲ್ಲವೇ ನಮ್ಮನೆಲ್ಲ ಪೊರೆವವಳು' ಎಂಬ ಸಂಚಿಯ ಹೊನ್ನಮ್ಮನ ಮಾತಿಗೆ ಪೂರಕವಾಗಿ ರಾಗೌ "ಜೀವನವೆಲ್ಲವ ಹಿಡಿದಿಡುವ ತಾಯೆ" ಎಂಬುದಾಗಿ ಹೇಳಿ ಸರ್ವರ ಬದುಕಿನಲ್ಲಿ ಸ್ತ್ರೀಯರ ಅಸ್ತಿತ್ವವನ್ನು ಎತ್ತಿಹಿಡಿದಿದ್ದಾರೆ.

'ಒಲಿದ ಹೆಂಡತಿ' ಎಂಬ ಶಿರ್ಷಿಕೆಯಲ್ಲಿ 'ಕರುಣಾಳು ರಾಘವನಲ್ಲಿ ತಪ್ಪಿಲ್ಲ' ಎಂಬ ಲಕ್ಷ್ಮೀಶನ ಮಾತನ್ನು ಅನುಸರಿಸಿದ ಸೀತೆ ತನ್ನದೇ ತಪ್ಪು ಎಂದು ನಿರ್ಧರಿಸಿ ಹೆಣ್ಣಾಗಿ ಹುಟ್ಟಿ ಈ ದೇಹವನ್ನು ಪೋಷಿಸುತ್ತಿದ್ದೇನಲ್ಲ ಅದೇ ನನ್ನ ತಪ್ಪು, ನಾನು ಕಡುಪಾಪಿ, ನನ್ನದೆ ಅಪರಾಧವಿದೆ ಎಂದು ಹೇಳುವ ಜಾನಕಿಯ ಸೌಜನ್ಯವನ್ನು ದುರುಪಯೋಗ ಪಡಿಸಿಕೊಂಡು ಕರುಣಾಳುವಾದ ರಾಘವನೇ ತನ್ನ ಪ್ರೀತಿಯ ಮಡದಿಯನ್ನು ಕಾಡಿಗಟ್ಟಿದನು. "ಕರುಣಾಳು ರಾಘವನೆ ಕರುಣೆಯಿನಿತಿರದೆ ಕಾಡಿಗಟ್ಟಿದನು ಕಡುನೇಹದ ಸತಿಯ" [ಪು.ಸಂ.೩೬೮] ಎಂಬ ವಾಕ್ಯವನ್ನು ವಿಮರ್ಶೆಗೆ ಒಳಪಡಿಸಿರುವ ರಾಗೌ ಅವರು ಪುರುಷಪ್ರಧಾನ ವ್ಯವಸ್ಥೆಯನ್ನು ವಿರೋಧಿಸಿ ರಾಮ ತನ್ನ ನಿಷ್ಕಲ್ಮಶ ಮನಸ್ಸಿನ ಹೆಂಡತಿಯನ್ನು ತುಂಬು ಗರ್ಭಾವಸ್ಥೆಯಲ್ಲಿ ಕಾಡಿಗೆ ಕಳುಯಿಸದೆ, ರಾಜ್ಯವನ್ನೇ ತ್ಯಜಿಸಿ ತನ್ನ ಹೆಂಡತಿಯನ್ನು ಉಳಿಸಿಕೊಳ್ಳಬೇಕಿತ್ತು ಎಂದು ಹೇಳಿದ್ದಾರೆ. ಇದು ಭಗವಂತನ ಸ್ವರೂಪನಾದ ಶ್ರೀರಾಮನಿಂದ ಸಾದ್ಯವಾಗಲಿಲ್ಲವಲ್ಲ ಎಂದು ನೋವನ್ನು ವ್ಯಕ್ತಪಡಿಸುತ್ತಾರೆ. ಈ ಮೂಲಕ ರಾಗೌ ವ್ಯವಸ್ಥಯನ್ನು ವಿರೋಧಿಸುವ, ಬದಲಾವಣೆಯನ್ನು ಬಯಸುವ ಪ್ರಗತಿಪರ ಚಿಂತಕರಾಗಿದ್ದಾರೆ.

'ವ್ಯತ್ಯಾಸ' ಎಂಬ ಕವನದಲ್ಲಿ ಹೆಣ್ಣನ್ನು ಆಶ್ಚರ್ಯ ಎಂದು ಗಂಡು ಪ್ರಶ್ನಾರ್ಥಕ ಎಂದು ಈ ಎರಡರ ನಡುವೆ ಬದುಕಿನ ಪುಸ್ತಕ ತೆರೆದುಕೊಳ್ಳುತ್ತದೆ. ಬದುಕಿಗೆ ಹೆಣ್ಣೆಂಬ ಆಶ್ಚರ್ಯ ಒಲಿದರೆ ಗಂಡಿಗೆ ಪ್ರಶ್ನೆಯ ಮಾತೆ ಇಲ್ಲ, ಎಲ್ಲವೂ ಸುಂದರ ಎಂದು ಹೆಣ್ಣಿನ ಮಹತ್ವವನ್ನು ವಿವರಿಸಿದ್ದಾರೆ. ಜತೆಗೆ "ಹೆಣ್ಣು ಕಾವ್ಯದ ಹಾಗೆ ಗಂಡು ಗದ್ಯದ ಹಾಗೆ" [ಪು.ಸಂ.೭೦] "ಭಾವ ಹೆಣ್ಣಾದರೆ ಬುದ್ಧಿ ಗಂಡಾಗುವುದು" ಎನ್ನುವ ರಾಗೌ ಸಂಸಾರದಲ್ಲಿ ಹೆಣ್ಣು-ಗಂಡು ಸಾಮರಸ್ಯದಿಂದ, ಒಬ್ಬರನ್ನೊಬ್ಬರು ಅರಿತು, ಹೊಂದಾಣಿಕೆಯಿಂದ ಉತ್ತಮವಾದ ಸಾಂಸಾರಿಕ ಜೀವನ ಮುನ್ನಡೆಸಬಹುದು ಎಂದಿದ್ದಾರೆ.

ಭಾರತೀಯ ಸಂಸ್ಕೃತಿ ವ್ಯವಸ್ಥೆಯಲ್ಲಿ 'ಪತಿಯೇ ಪರದೈವ' ಎಂಬ ಪರಿಕಲ್ಪನೆ ಬಹಳ ಹಿಂದಿನಿಂದಲು ಬೆಳೆದುಕೊಂಡು ಬಂದಿದೆ. ಅದರೆ ಎಲ್ಲೂ ಕೂಡ 'ಪತ್ನಿಯೇ ಪರದೈವ' ಎನ್ನುವ ಉಲ್ಲೇಖಗಳು ಕಂಡುಬರುವುದಿಲ್ಲ. ನಮ್ಮಲ್ಲಿ ಸಮಾಜಿಕ ಕ್ರಾಂತಿಯಾಗುವ ಮುಖಾಂತರ ಮುಂದಿನ ದಿನಗಳಲ್ಲಾದರು ಇಂತಹ ಹೇಳಿಕೆಗಳು ಬರಬೇಕು.

ಆದರೆ ಆದ್ಯ ವಚನಕಾರರಾದ ಜೇಡರ ದಾಸಿಮಯ್ಯನವರು 'ಸತಿ-ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂದಿದ್ದಾರೆ. ವಚನಕಾರರು ಹೆಣ್ಣು-ಗಂಡು ಇಬ್ಬರನ್ನು ಸಮಾನವಾಗಿ ಕಂಡಿದ್ದಾರೆ. ವಚನ ಸಾಹಿತ್ಯದಿಂದ ಪ್ರೇರಣೆಗೊಂಡಿರುವ ರಾಗೌ ಅವರು,

ಆ ದೇವ ಈ ದೇವ ಮಾದೇವನನು ಕಾಣೆ
ಇರುವನೊಬ್ಬನೆ ಪತಿದೇವ
ಒಲಿದರೆ ಒಲಿಯಲಿ ಬಿಟ್ಟರೆ ಬಿಡಲವನು
ಒಲಿದರೆ ಸಾಕವ್ವ ನನ್ನವ
[ರಾಗೌ ಸಮಗ್ರ ಕಾವ್ಯ ಪು.ಸಂ.೭೧]

ಈ ಸಾಲುಗಳ ಮೂಲಕ ಮತ್ತದೆ ಹಿಂದಿನ ಸಂಪ್ರದಾಯವನ್ನೇ ಎತ್ತಿಹಿಡಿದಿದ್ದಾರೆ. ಮೇಲಿನ ಕವನಗಳಲ್ಲಿ ರಾಗೌ ಸ್ತ್ರೀಯರ ನೋವು, ಸಂಕಟ, ವೇದನೆಯನ್ನು ವಿಶ್ಲೇಷಿಸಿದ್ದಾರೆ. ಪ್ರಸ್ತುತ ಕವನದಲ್ಲಿ ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರತಿಪಾದಿಸಿರುವುದು ಕಂಡುಬರುತ್ತದೆ. ಹೆಣ್ಣು ತನ್ನ ಗಂಡನನ್ನೇ ದೇವರೆಂದು ಭಾವಿಸಿದ್ದಾಳೆ, ಒಂದು ವೇಳೆ ದೇವರು ಒಲಿಯದಿದ್ದರು ಚಿಂತೆ ಇಲ್ಲ, ನನ್ನವನು ಒಲಿದರೆ ಸಾಕು ಎಂದು ಹೇಳುವ ನೆಲೆಯಲ್ಲಿ ಪತ್ನಿಗೆ ತನ್ನ ಪತಿಯ ಮೇಲಿರುವ ಪ್ರೀತಿಯು ವ್ಯಕ್ತವಾಗಿರುವುದನ್ನು ಕಾಣಬಹುದು.

'ಮುಗ್ದೆ ಇವಳು' ಎಂಬ ಕವನದಲ್ಲಿ ಏನೂ ಅರಿಯದ ಮುಗ್ದ ಹೆಣ್ಣು ಮನಸ್ಸೊಂದನ್ನು ವಿಶ್ಲೇಷಿಸಿದ್ದಾರೆ. 'ಮುಗ್ದೆ ಇವಳು ಹುಲ್ಲೆ ಕಣ್ಣಿನವಳು' ಎಂದು ಹೇಳುವ ಮೂಲಕ ಆಕೆಯ ಮನಸು ನಂದಿ ಬಾಡಿಹೋಗುವ ಹೂವಿನಂತೆ ಇವಳ ಮನಸು ಮತ್ತು ಕನಸು ಎಂದು ಹೇಳಿ ಅದರೂ ಬಹಳ

ಖುಷಿಯಿಂದ ಜೀವನ ಸಾಗಿಸುವ ಮುಗ್ದೆ ಇವಳು. ಏನೂ ಅರಿಯದ ಅಂತರಂಗದಲ್ಲಿ ಅರಿಯಲಾರದಷ್ಟು ಭಾವನೆಗಳು ಕುಡಿಯೊಡೆದು ಅರಳಿ ಅಲ್ಲೇ ಬಾಡಿಹೋಗುವಂತಹ ಮನಸ್ಸನ್ನು ಹೊಂದಿರುವ ಮುಗ್ದೆ ಇವಳು ಎಂದು ನಿಷ್ಕಲ್ಮಶ ವ್ಯಕ್ತಿತ್ವ ಹೆಣ್ಣಿನದು ಎಂದಿದ್ದಾರೆ.

'ಇವಳು' ಎನ್ನುವ ಕವನದಲ್ಲಿ ರಾಗೌ ಅವರು ತಮ್ಮ ಹೆಂಡತಿಯನ್ನು ಕುರಿತು ಹೇಳಿದ್ದಾರೆ. "ನನ್ನ ಜೀವಕ್ಕಿವಳು ಉಚ್ವಾಸ ನಿಶ್ವಾಸ" [ ಪು.ಸಂ.೨೯೯] ಎಂಬ ಸಾಲಿನ ಮೂಲಕ ತಮ್ಮ ಬದುಕಿಗೆ ಬೆಳಕಾಗಿದ್ದ ಪತ್ನಿ ಯಶೋದ ಅವರನ್ನು ಸ್ಮರಿಸಿದ್ದಾರೆ. ರಾಗೌ ತಮ್ಮ ಬದುಕಿನುದ್ದಕ್ಕೂ ನೋವನ್ನೇ ಉಂಡವರು ತಮ್ಮ ಮುದ್ದಾದ ಮಗಳನ್ನು ಕಳೆದುಕೊಳ್ಳುತ್ತಾರೆ. ಇದಕ್ಕೂ ಮೊದಲೇ ಜನ್ಮ ಕೊಟ್ಟ ತಾಯಿಯನ್ನು ಹುಟ್ಟಿದ ಕೆಲತಿಂಗಳಲ್ಲೇ ಕಳೆದುಕೊಳ್ಳುತ್ತಾರೆ. ಹಾಗಾಗಿ ತಾಯಿ-ಮಗಳನ್ನು ಕಳೆದುಕೊಂಡಾಗ ಅದಂತಹ ನೋವನ್ನು ಸಂಪೂರ್ಣವಾಗಿ ನಿವಾರಿಸಲು ಸಾದ್ಯವಾಗದಿದ್ದರು ಬಹುತೇಕವಾಗಿ ನೋವನ್ನು ಮರೆಸಿ ಸುಖವನ್ನಿತ್ತವರು ಯಶೋದರವರು.

ತಮ್ಮ ಪತ್ನಿಯನ್ನೇ ತಾಯಿ ಎಂದು ಭಾವಿಸುವ ರಾಗೌ "ನೋವಿನಲ್ಲೂ ಮೋಗದಿ ನಗೆಯ ಹೂ ಮೂಡಿವ ಈಕೆ ನನ್ನ ಮನೆಗಿವಳೆ ತುಂಬು ಹಣತೆ" ಎಂದು ಹೇಳಿ ಯಶೋದರವರ ಕಾಯಕದ ಬಗ್ಗೆ ಸಂತಸವನ್ನು ವ್ಯಕ್ತಪಡಿಸುತ್ತಾರೆ. "ತುಸು ಸೋಮಾರಿಯಾದ ನನಗೆ ಸದಾ ಅಲರಾಂ ಗಡಿಯಾರದಂತೆ". [ಪು.ಸಂ.೨೯೯] ನನ್ನ ಅನಂತದಾಸೆಯ ಚೆಲುವು ಇವಳು ಎಂದು ತಮ್ಮ ಪತ್ನಿಯ ಮನಸ್ಸನ್ನು ಎಲ್ಲೂ ನೋಯಿಸದಂತೆ ಅವರ ಮನಸ್ಥಿತಿಯನ್ನು ಅರಿತು ಬಾಳಿದವರು ರಾಗೌ.

ಮುಖ್ಯವಾಗಿ ಬಾರತೀಯ ಸಮಾಜದಲ್ಲಿ ಸಮಾಜಿಕ ಕಳಕಳಿಯನ್ನು ಹೊಂದಿದ ಮಹಿಳೆಯರು ಅಪಾರ

ಸಂಖ್ಯೆಯಲ್ಲಿದ್ದಾರೆ. ಅಂತವರಲ್ಲಿ ಮದರ್ ಥರೆಸಾ ಅವರು ಮುಂಚೂಣೆಯಲ್ಲಿದ್ದಾರೆ. ಅವರನ್ನು ತಾಯಿ 'ಮದರ್ ಥೆರೆಸಾಗೆ' ಎಂಬ ಕವನದಲ್ಲಿ ಸ್ಮರಿಸುವ ಮೂಲಕ ಅವರ ಕಾಯಕ ನಿಷ್ಠೆಯಿಂದ ಆರ್ತರ ಹೃದಯಗಳಲ್ಲಿ, ಕನಿಷ್ಠರೆದೆಯಲಿ ಸದಾ ಚಿರಾಯು ಎಂದಿದ್ದಾರೆ. "ಬಾನು ಮಳೆಗರೆದ ಮುಂಜಾನೆಯ ಹವಾದಂತೆ ನೊಂದವರೆದೆಯಲಿ ನವ ಚಿಲುಮೆ" ಎಂದು [ಪು.ಸಂ.೨೧೭]

ಸಮಾಜದ ನಿಕೃಷ್ಟರನ್ನು ತನ್ನ ಮಕ್ಕಳಂತೆ ಸಲಹಿದವರು. ಕರುಣೆ ಮತ್ತು ಪ್ರೀತಿ ಇವರ ಆಯುಧ. ಅಂದಿನ ಕಾಲದ ಬಡವರ ಬದುಕಿಗೆ ಆಶಾಕಿರಣರಾಗಿದ್ದರು. ಇಂಥಹ ಸಾಕಷ್ಟು ಸ್ತ್ರೀಯರು ಸಮಾಜದಲ್ಲಿ ನೊಂದವರ ಬದುಕಿಗೆ ಬೆಳಕಾಗಿದ್ದಾರೆ. ತಮ್ಮ ಜೀವನದ ಹಂಗು ತೊರೆದು ಶುದ್ಧ ಕಾಯಕದಲ್ಲಿ ನಿರತರಾಗಿರುವ ತಾಯಿ ಥೆರೆಸಾರಂಥಹ ಮಹಿಳೆಯರನ್ನು ಸದಾ ಸ್ಮರಿಸಬೇಕು ಎಂದಿದ್ದಾರೆ.

ರಾಗೌ ಸ್ತ್ರೀಯರನ್ನು ಎಲ್ಲ ನೆಲೆಗಳಿಂದಲೂ ವಿಶ್ಲೇಷಣೆ ಮಾಡಿದ್ದಾರೆ. ಇವರ ಸಾಹಿತ್ಯದಲ್ಲಿ ಸ್ತ್ರೀಯರ ಬದುಕಿನ ಪ್ರತಿಯೊಂದು ಸ್ಥರಗಳು ಅನಾವರಣಗೊಂಡಿದೆ. ಯಾವುದೇ ರೀತಿಯ ಸ್ತ್ರೀಯರ ಬದುಕಿನ ನೆಲೆಯನ್ನು ಬಿಡದೆ ತಾವು ಕಂಡಂತೆ ಸ್ತ್ರೀಯರನ್ನು ಬರೆವಣಿಗೆಯ ಮೂಲಕ ಹೊರತಂದಿದ್ದಾರೆ.

ಅದರಂತೆ 'ಮಹಾಮಹಿಳೆಯರು' ಎನ್ನುವಂತಹ ಕವನದಲ್ಲಿ ಸ್ತ್ರೀಯರ ನಡುವೆ ನಡೆಯುವಂಥಹ ಭ್ರಷ್ಟಚಾರ, ವಿವಿದ ವಲಯಗಳಲ್ಲಿ ನಡೆಯುವ ಅಸಾಮಾನತೆ, ಬಡ ಮಹಿಳೆ ಮತ್ತು ಶ್ರೀಮಂತ ಮಹಿಳೆ ಎಂಬಿತ್ಯಾದಿ ತಾರತಮ್ಯವನ್ನು ವಿಡಂಬನೆ ಮಾಡಿದ್ದಾರೆ.

ಸೀನೇಮಾ ಹೀರೋ ಹೀರೋಯಿನ್ನುಗಳ
ರಾಜಕೀಯ ತಿಪ್ಪರಲಾಗದವರ
ಪಂದ್ಯ ಪುರುಷೋತ್ತಮರ
ಮೋಸದಾಟ ಹೀನಾಯಗಳ
ನಡುವೆಯೇ ಮಿಂಚುತ್ತಾರೆ
[ರಾಗೌ ಸಮಗ್ರ ಕಾವ್ಯ ಪು.ಸಂ. ೪೧೦]

ಪ್ರಸ್ತುತದ ದಿನಮಾನಗಳಲ್ಲಿ ಸ್ತ್ರೀ ಸಿನೇಮಾ, ರಾಜಕೀಯ, ಕ್ರೀಡೆ ಮತ್ತಿತರ ಕ್ಷೇತ್ರಗಳಲ್ಲಿ ತನ್ನದೇ ಛಾಪನ್ನು ಮೂಡಿಸಿದ್ದಾಳೆ. ಈ ಸಂದರ್ಭದಲ್ಲಿ ಕೆಲವರು ತಮ್ಮ ಸ್ವ ಸಾಮರ್ಥ್ಯದಿಂದ ಉತ್ತಮ ಸ್ಥಾನ–ಮಾನಗಳನ್ನುಗಳಿಸಿದರೆ. ಇನ್ನೂ ಕೆಲವರು ಹಣ, ಅಧಿಕಾರ ಮತ್ತು ರಾಜಕೀಯ ಬಲದಿಂದ ಪಡೆಯುತ್ತಾರೆ. ಇವರ ಬದುಕು ಸುಖ, ಶಾಂತಿ, ನೆಮ್ಮದಿಯಿಂದ ತುಂಬಾ ವ್ಯವಸ್ಥಿತವಾಗಿ ಬದುಕನ್ನು ಸವಿಯುತ್ತಾರೆ. ಈ ಮೋಸದಾಟದಲ್ಲಿ ಮಿಂಚುವವರು ಕೆಲವರಾದರೆ, ವಂಚಿರಾದವರೇ ಸಾಕಷ್ಟು. ಬಡತನ ಮತ್ತು ಹಸಿವಿನಿಂದ ಕುಟುಂಬ ನಿರ್ವಹಣೆ ಮಾಡಲಾಗದೇ ಬದುಕೆ ಸಾಕು ಎನ್ನುವಂಥಹ ಸ್ತ್ರೀಯರು ಕೂಡ ನಮ್ಮ ನಡುವೆ ಇದ್ದಾರೆ ಎಂದು ಹೇಳುವ ರಾಗೌ ಮುಂದುವರೆದು,

ನಮ್ಮ ಸಾಲುಮರದ ತಿಮ್ಮಕ್ಕ
ಕಿವುಡು ಮೂಗರಿಗಾದ ಪುಟ್ಟೀರಮ್ಮ
ಹೆರಿಗೆ ವಿದ್ಯೆಯ ಜಲ್ಲೆಸಿದ್ದಮ್ಮ
ತುಳಸಿಯಂಥ ವನದೇವತೆಯರು
[ರಾಗೌ ಸಮಗ್ರ ಕಾವ್ಯ ಪು.ಸಂ. ೪೧೦]

ಮರಗಳನ್ನೇ ತನ್ನ ಮಕ್ಕಳೆಂದು ಭಾವಿಸಿ ಈಡೀ ಮನುಕುಲದ ನೆಮ್ಮದಿಗೆ ಕಾರಣರಗಿರುವ ಪದ್ಮಶ್ರೀ ಪುರಸ್ಕೃತರಾದ ಸಾಲುಮರದ ತಿಮ್ಮಕ್ಕ, ಕಿವುಡು ಮತ್ತು ಮೂಕ ಹೆಣ್ಣು ಮಕ್ಕಳ ಬದುಕಿಗೆ ಬರವಸೆಯಾಗಿದ್ದ ಪುಟ್ಟೀರಮ್ಮ, ಇವತ್ತೀಗೂ ಕೂಡ ಇವರ ಹೆಸರಿನಲ್ಲಿ ಪುಟ್ಟೀರಮ್ಮ ರೆಸಿಡೆಶ್ಶಿಯಲ್

ಕಿವುಡು ಹೆಣ್ಣು ಮಕ್ಕಳ ಪಾತ ಶಾಲೆಯು ಉತ್ತಮ ಶಿಕ್ಷಣ ನೀಡುವ ಮೂಲಕ ಅಂಗವಿಕಲ ಹೆಣ್ಣು ಮಕ್ಕಳ ಬದುಕಿಗೆ ದಾರಿದೀಪವಾಗಿದೆ. ಹಾಗೆಯೇ ಹೆರಿಗೆ ವಿಚಾರದಲ್ಲಿ ನಿಪುಣರಾಗಿದ್ದ ಜಲ್ಲೆಸಿದ್ದಮ್ಮನವರ ಸೇವೆ ಎಂದಿಗೂ ಶಿಖರಪ್ರಾಯವಾದದು. ಹೀಗೆ ಯಾವುದೇ ಪಲಾಪೇಕ್ಷೆ ಇಲ್ಲದೇ ತಮ್ಮ ಈಡೀ ಬದುಕನ್ನೇ ಸಮಾಜ ಸೇವೆಗಾಗಿ ಮುಡಿಪಿಟ್ಟ ಸ್ತ್ರೀ ಸಂಕುಲಕ್ಕೆ ಗೌರವ ತಂದುಕೊಡುವ ಮಹಾನ್ ಮಹಿಳೆಯರು ಎಂದು ಅಭಿಮಾನದಿಂದ ಉಲ್ಲೇಖಿಸುತ್ತಾರೆ. ಯಾವುದೇ ಬಗೆಯ ಮೊಸ, ವಂಚನೆ ಮತ್ತು ಅಸೂಯೆ ಇಲ್ಲದೆ ಬದುಕಿ ಬಾಳಿದವರು. ಇವರು ನಮಗೆ ಆದರ್ಶಪ್ರಾಯರಾಗಬೇಕು. ಇವರ ಬದುಕಿನ ಬಾಳ ಪಥದಲ್ಲಿ ನಮ್ಮೆಲ್ಲರ ಜೀವನ ಪಯಣ ಸಾಗಬೇಕು ಎಂಬುದೇ ರಾಗೌ ಅವರ ಅಭಿಪ್ರಾಯವಾಗಿದೆ.

ಸಾಮಾನ್ಯವಾಗಿ ಕನ್ನಡದ ಎಲ್ಲ ಕವಿಗಳು ಸ್ತ್ರೀಪರ ಚಿಂತನೆಯನ್ನು ತಮ್ಮದೇ ಆದ ಅರಿವಿನ ಹಿನ್ನೆಲೆಯಲ್ಲಿ ನಿರೂಪಿಸಿರುವುದು ಕಂಡುಬರುತ್ತದೆ. ಆದರೆ ರಾಗೌ ಅವರೆಲ್ಲರಿಗಿಂತ ವಿಭಿನ್ನವಾಗಿ ಕಾಣುತ್ತಾರೆ. ರಾಗೌ ಹೆಣ್ಣಿನ ಬಗ್ಗೆ ತಳೆದಿರುವ ನಿಲುವುಗಳು ಬಹುಷಹ ಬೇರೆ ಯಾವ ಕವಿಯು ತಳೆದಿಲ್ಲ ಎನಿಸುತ್ತದೆ. ಇದಕ್ಕೆ ಸಾಕಷ್ಟು ಕಾರಣಗಳಿವೆ ಮುಖ್ಯವಾಗಿ ತಮ್ಮ ಜೀವ ಎಂದು ಭಾವಿಸಿದ್ದ ಮಗಳು ಕವಿತಾ ಅವರ ಮರಣ. ಮದುವೆಯಾದ ಹೊಸತರಲ್ಲೇ ಮಗಳ ಬದುಕು ಅಂತ್ಯಗೊಂಡು ಅಘಾತ ಸಂಭವಿಸಿದಾಗಲಂತೂ ರಾಗೌ ಬದುಕಿನಲ್ಲಿ ಬಿರುಗಾಳಿಯೇ ಬಡಿದಂತಾಯಿತು. ಅಂದಿನಿಂದ ಹೆಣ್ಣಿನ ನೋವು–ಸಂಕಟಗಳು ತನ್ನ ನೋವೆಂದೆ ಭಾವಿಸಿ ಮಹಿಳೆಯರ ವಿಮೋಚನೆಗಾಗಿ, ಮಹಿಳೆಗೆ ಸಮಾಜದಲ್ಲಿ ವ್ಯವಸ್ಥಿತವಾದ ಗೌರವ ಸ್ಥಾನಮಾನಗಳನ್ನು ನಿರ್ಮಾಣಮಾಡುವುದಕ್ಕಾಗಿ 'ಯಶೋದ ರಾಗೌ ಟ್ರಸ್ಟ್'ನ್ನು ಸ್ಥಾಪಿಸಿ ಪ್ರತಿವರ್ಷ ವಿಶೇಷ ಸಾಧನೆ ಮಾಡಿದ ಮಹಿಳೆಯರಿಗೆ ಪ್ರಶಸ್ತಿ ನೀಡಿ ಗೌರವಿಸುವಂತ ಮಹತ್ವದ ಕಾರ್ಯವನ್ನು ಜೊತೆಗೆ ಮಹಿಳಾ ಪರ ಜಾಗೃತಿ ಮೂಡಿಸುವಂತ ಸಾಹಿತ್ಯ ಕೃಷಿಯನ್ನು ಮಾಡುತ್ತಿದ್ದಾರೆ. ಇತ್ತೀಚೆಗೆ ಅವರ ಧರ್ಮಪತ್ನಿ ಯಶೋದ ಅವರನ್ನು ಕಳೆದುಕೊಂಡು ಮತ್ತದೇ ನೋವಿಗೆ ಸಿಲುಕಿದ್ದಾರೆ. ಇದರ ನಡುವೆಯು ಬದುಕಿನಲ್ಲಿ ಎಲ್ಲೂ ಧೃತಿಗೆಡದೆ ಆದರ್ಶಯುತವಾಗಿ ಜೀವನ ನಡೆಸುತ್ತಿದ್ದಾರೆ.

ಇಂದು ನಾವೆಲ್ಲರೂ ಇಪ್ಪತ್ತೊಂದನೆಯ ಶತಮಾನದಲ್ಲಿ ಜೀವಿಸುತ್ತಿದ್ದೇವೆ. ಈ ಹಂತದಲ್ಲಿ ಮಹಿಳೆಯು ಕೂಡ ಪುರುಷನಷ್ಟೇ ಸಮಾನಳು ಎಂಬುದನ್ನು ತನ್ನ ವಿಶಿಷ್ಟ ಕಾರ್ಯಸಾಧನೆ ಮೂಲಕ ಸಾಬೀತು ಮಾಡಿದ್ದಾಳೆ. 'ಮಹಿಳೆಯ ಮಹಾಗಾಥೆ' ಎನ್ನುವ ಕವನದಲ್ಲಿ ಪುರುಷ ತನಗನಿಸಿದಂತೆ ಸ್ತ್ರೀಯನ್ನು ಕುರಿತು ಒಂದೇ ನೆಲೆಗಟ್ಟಿನಲ್ಲಿ ಬರೆದುಕೊಂಡು ಬಂದಿದ್ದಾನೆ. ಆದರೆ ಇನ್ನೂ ಮುಂದೆ ಎಲ್ಲವೂ ಬದಲಾವಣೆಯಾಗಿ ಸ್ತ್ರೀಯರ ನೇತೃತ್ವದಲ್ಲಿ ಈಡೀ ಜಗತ್ತೆ ಮುನ್ನಡೆಯುತ್ತದೆ. ಯಾಕೆಂದರೆ

ಅವಳು ಸ್ವತಂತ್ರಳು, ತನ್ನ ಸ್ವಂತ ಆಲೋಚನೆಯ ಮೂಲಕ ಯಾವುದೇ ಸಂಧಿಗ್ದ ಸಮಯದಲ್ಲೂ ಕೂಡ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿದ್ದಾಳೆ ಎನ್ನುತ್ತಾ "ಮುಂದಿನದೆಲ್ಲ ಮಹಿಳೆಯ ಮಹಾಗಾಥೆಯೆ!" [ಪು.ಸಂ.೪೨೧] ಎಂದಿದ್ದಾರೆ ರಾಗೌ. ಈ ಮೂಲಕ ಪ್ರಸ್ತುತ ಕಾಲಘಟ್ಟದಲ್ಲಿನ ಸ್ತ್ರೀಯರ ಬದುಕಿನ ಸ್ವರೂಪದ ಮೇಲೆ ಬೆಳಕು ಚೆಲ್ಲಿದ್ದಾರೆ.

ರಾಗೌ ಅವರಿಗೆ ಸ್ತ್ರೀ ಎಂದರೆ ಅಪಾರ ಗೌರವ. ಇವರು ತಮ್ಮ ತರಗತಿಯ ಸಮಯದಲ್ಲಾಗಲಿ ಅಥವಾ ಬೇರೆಡೆಯಾಗಲಿ ಸ್ತ್ರೀಯರ ಜೊತೆ ನೇರವಾಗಿ ಮುಖಕೊಟ್ಟು ಮಾತನಾಡಿದವರಲ್ಲ. ಆದರೆ ಸೂಕ್ಷ್ಮದೃಷ್ಟಿಯುಳ್ಳವರಾಗಿದ್ದರು. ಪ್ರೀತಿಯ ಮಗಳಾದ ಕವಿತಾರವರ ಮರಣ, ಇತ್ತೀಚೆಗೆ ತಮ್ಮ ಉಸಿರಾಗಿದ್ದ ಯಶೋದರವರನ್ನು ಕಳೆದುಕೊಂಡದ್ದು ತುಂಬಲಾರದಷ್ಟು ನಷ್ಟವನ್ನು, ಜತೆಗೆ ಅಗಾದವಾದ ನೋವನ್ನು ಅನುಭವಿಸುತ್ತಾರೆ. ಆದರೂ ಎಲ್ಲೂ ಧೃತಿಗೆಡದೆ ತಮ್ಮ ಸಾಹಿತ್ಯದುದ್ದಕ್ಕೂ ಸ್ತ್ರೀಯನ್ನು ಕುರಿತು ಬರೆಯುತ್ತಲೇ ಬಂದಿದ್ದಾರೆ. ಒಟ್ಟಾರೆ ಇವರ ಬರೆವಣಿಗೆಯ

ಉದ್ದೇಶ ಸ್ತ್ರೀಯರಿಗೆ ಒಂದು ಸುಂದರ ಬದುಕನ್ನು ನಿರ್ಮಿಸುವುದಾಗಿದೆ. ಹೀಗೆ ಬದುಕು ಮತ್ತು ಬರೆಹ ಎರಡರಲ್ಲಿಯೂ ರಾಗೌ ಅವರು ವ್ಯಕ್ತಪಡಿಸಿರುವ ಸ್ತ್ರೀಪರ ಚಿಂತನೆಗಳು ಅನನ್ಯಯವೂ, ಅನುಕರಣೀಯವೂ ಮತ್ತು ಸ್ವಾಗತರ್ಹವೂ ಆಗಿದೆ ಎಂಬುದರಲ್ಲಿ ಯಾವುದೇ ಅತಿಶಯೋಕ್ತಿ ಇಲ್ಲ.

**ಪರಾಮರ್ಶನ ಗ್ರಂಥಗಳು**


1. ಡಾ.ರಾಗೌ ಸಮಗ್ರ ಕಾವ್ಯ, ೨೦೧೨, ಪದ್ಮಶೇಖರ ಪ್ರಿಂಟರ್ಸ್, ಮೈಸೂರು.
2. ಡಾ.ರಾಗೌ ಕಾವ್ಯದ ನಡಿಗೆ ಹೊಸ ದಿಕ್ಕಿನೆಡೆಗೆ, ೨೦೨೧, ಅವಿನಾಶ್ ಗ್ರಾಫಿಕ್ಸ್, ಮಂಡ್ಯ.
3. ಡಾ.ರಾಗೌ. ಕಲಾತೀತ, ೨೦೧೯, ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮೈಸೂರು.
4. ಡಾ.ಕವಿತಾ ರೈ. ಕಾವ್ಯ ತತ್ತ್ವಾನುಸಂಧಾನ, ೨೦೧೮, ಸಪ್ನ ಎಂಟರ್ಸ್ ಪ್ರೈಸಸ್, ಬೆಂಗಳೂರು.
5. ಡಾ.ಬೆಳ್ಳೂರು ವೆಂಕಟಪ್ಪ ರಾಗೌ ಕಾವ್ಯ ವಿಮರ್ಷೆ, ೨೦೦೯, ಪ್ರಗತಿ ಪ್ರಿಂಟರ್ಸ್, ಬೆಂಗಳೂರು.
6. ಡಾ.ಸಿ.ಎನ್.ರಾಮಚಂದ್ರನ್. ಸಾಹಿತ್ಯವಿಮರ್ಶೆ,೨೦೧೮, ಸಪ್ನ ಎಂಟರ್ಸ್ ಪ್ರೈಸಸ್, ಬೆಂಗಳೂರು.